ಶ್ರೀ ಡಿ.ಜಿ. ಬಸಪನಗೌಡ.—ಅಧ್ಯಕ್ಷರೇ, ಈ ರಸ್ತೆ ಭದ್ರಾವತಿ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿ ಬಹಳ ಮುಖ್ಯವಾದ ರಸ್ತೆ. ನನ್ನ ಪುಕಾರ ನನ್ನ ತಾಲ್ಲೂಕಿನಲ್ಲಿ ಕಳೆದ ೧೫ ವರ್ಷಗಳಿಂದ ಒಂದು ನಯಾಪೈಸೆ ಕೆಲಸವೂ ಆಗಿಲ್ಲ. ಭದ್ರಾವತಿಯಲ್ಲಿ ೧೦ ಲಕ್ಷ ಖರ್ಚಾಗಿದೆ. ಅದು ಕೆ.ಕೆ. ರಸ್ತೆಗಾಗಿ. ನಾನು ಆ ಕ್ಷೇತ್ರದ ಶಾಸಕನಾದ್ದರಿಂದ ನನ್ನ ಕಡೆ ಜನ ನೋಡಿ ಕೇಕೆ ಮಾಡುತ್ತಾರೆ. ಆದುದರಿಂದ ಆ ಕೆಲಸಕ್ಕಾಗಿ ೧೦ ಲಕ್ಷ ರೂ.ಗಳ ಮಂಜೂರಾತಿಯನ್ನು ಈ ಸಲವಾದರೂ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಇದು ಎಂ ಡಿ ಆರ್ ರಸ್ತೆ. ೩೫ ಕಿಲೋಮೀಟರ್ ಉದ್ದವಿದೆ. ೨೦ ಕಿಲೋಮೀಟರ್ ಭದ್ರಾವತಿ ತಾಲ್ಲೂಕಿನಲ್ಲಿ ಬರುತ್ತದೆ. ೧೫ ಕಿಲೋಮೀಟರ್ ಉದ್ದ ಹೊನ್ನಾಳಿ ತಾಲ್ಲೂಕಿನಲ್ಲಿ ಬರುತ್ತದೆ. ಇಲ್ಲಿಯವರೆಗೆ ಆ ರಸ್ತೆಯ ಕೆಲಸಕ್ಕಾಗಿ ೧೯೮೩–೮೪ರಲ್ಲಿ ೫ ಲಕ್ಷದ ೧೧ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ೧೯೮೪–೮೫ರಲ್ಲಿ ೧ ಲಕ್ಷದ ೮೨ ಸಾವಿರ ರೂಪಾಯಿಗಳೆನ್ನು ಖರ್ಚು ಮಾಡಲಾಗಿದೆ. ೧೯೮೫–೮೬ರಲ್ಲಿ ೩ ಲಕ್ಷದ ೬೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಪ್ರತಿ ವರ್ಷ ಖರ್ಚು ಮಾಡುತ್ತಿರುವ ಹಣ ೧ ಲಕ್ಷ ರೂಪಾಯಿ ಹಣವನ್ನು ಎಸ್. ಆರ್. ನಲ್ಲಿ ಖರ್ಚು ಮಾಡುತ್ತಿದ್ದೇವೆ. ಉಳಿದಂತಹ ಎಲ್ಲ ರಸ್ತೆಗಳನ್ನು ಯೋಗ್ಯ ಸುಸ್ಥಿತಿಗೆ ತರಬೇಕಾದರೆ ೨೪ ಲಕ್ಷ ರೂಪಾಯಿ ಹಣ ಬೇಕು. ಹೊನ್ನಾಳಿ ತಾಲ್ಲೂಕಿನಲ್ಲಿ ಹಣ ಖರ್ಚಾಗಿರದಿದ್ದರೆ ಭದ್ರಾವತಿ ತಾಲ್ಲೂಕಿನಲ್ಲಿ ಖರ್ಚಾಗಿರಬಹುದು. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ತೀರಾ ಹದಗೆಟ್ಟಿರುವ ರಸ್ತೆಯನ್ನು ಸರಿ ಮಾಡಲಿಕ್ಕೆ ಹಣವನ್ನು ಕೂಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೧೧೧ (೫೮೬) ಶ್ರೀ ಚಂದ್ರಕಾಂತ ಬಿಲ್ಲವ್,

ಪ್ರಶ್ನೆ ನಂ. ೧೧೭ (೫೭೦) ಶ್ರೀ ಬಿ. ವಿ. ಕರೀಗೌಡ ಸದಸ್ಯರುಗಳು ಗೈರು ಹಾಜರಾಗಿದ್ದಾರೆ.

ಗ್ರಾಮ ಸೇವಕರುಗಳಿಗೆ ನಿವೇಶನಗಳ ಮಂಜೂರಾತಿ

೫೩೩ (೩೫೯) ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಬಳ್ಳಾರಿ ಜಿಲ್ಲೆಯಲ್ಲಿ ಕೃಷಿ ಗ್ರಾಮ ಸೇವಕರಿಗೆ ಮಂಜೂರಾಗಿರುವ ಒಟ್ಟು ನಿವೇಶನಗಳು, ಅದರಲ್ಲಿ ತಾಲ್ಲೂಕುವಾರು ಮಂಜೂರಾಗಿರುವ ನಿವೇಶನಗಳು ಮತ್ತು ಅದರ ಹೆಸರುಗಳು?

(ಆ) ಹರಪನಹಳ್ಳಿಯಲ್ಲಿ ಮಂಜೂರಾಗಿರುವ ನಿವೇಶನಗಳ ಸಂಖ್ಯೆ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

(ಅ) ಕೃಷಿ ವಿಸ್ತರಣಾ ಯೋಜನೆ–೧೧ ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ–೧೧ ರಡಿಯಲ್ಲಿ ೬೨ ನಿವೇಶನಗಳು ಕೃಷಿ ಸಹಾಯಕರಿಗೆ ಮಂಜೂರಾಗಿರುವುವು. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ :

ಸಂಖ್ಯೆ	ತಾಲ್ಲೂಕು	ಮಂಜೂರಾಗಿರುವ ನಿವೇಶನಗಳು
೧.	ಶಿರುಗುಪ್ಪ	೧೯
೨.	ಬಳ್ಳಾರಿ	೫
೩.	ಹೊಸಪೇಟೆ	೪
೪.	ಹಗರಿಬೊಮ್ಮನಹಳ್ಳಿ	೫
೫.	ಸಂಡೂರು	೪
೬.	ಕೂಡ್ಲಿಗಿ	೪
೭.	ಹರಪನಹಳ್ಳಿ	೫
೮.	ಹಡಗಲಿ	೧೬
	ಒಟ್ಟು	೬೨

(ಆ) ೫.

ಶ್ರೀ ಬಿ. ಹೆಚ್. ಯಂಕನಾಯಕ್.—ಬಳ್ಳಾರಿ ಜಿಲ್ಲೆಯ ಶಿರಗುಪ್ಪ, ಬಳ್ಳಾರಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ. ಕೂಡ್ಲಿಗಿ, ಹಡಗಲಿ ಈ ತಾಲ್ಲೂಕುಗಳಿಗೆ ವಿಶ್ವ ಬ್ಯಾಂಕಿನಿಂದ ಕೈಗೊಂಡಂಥ ಯೋಜನೆಯನ್ವಯ ಕಾರ್ಯಕ್ರಮಗಳ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸವಿದೆ. ಮಲತಾಯಿ ಧೋರಣೆಯನ್ನು ತೋರಲಾಗಿದೆ. ಒಂದು ತಾಲ್ಲೂಕಿಗೆ ೧೯ ಮತ್ತೊಂದು ತಾಲ್ಲೂಕಿಗೆ ೪–೫ ಈ ರೀತಿ ಕೊಟ್ಟಿರುವುದು ಏತಕ್ಕೆ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ವಿಶ್ವಬ್ಯಾಂಕ್ ನೆರವಿನ ಯೋಜನೆಗಳಾಗಿರುವುದರಿಂದ ಸ್ಥಳೀಯ ಪಂಚಾಯತಿಗಳು ನಿವೇಶನಗಳನ್ನು ಒದಗಿಸಿ ಕೊಡಬೇಕಾಗಿದೆ. ಯಾವುದೇ ಪಂಚಾಯತಿಗಳವರು ನಿವೇಶನಗಳನ್ನು ಒದಗಿಸಿ ಕೊಡುವುದಕ್ಕೆಮುಂದೆ ಬಂದಿದ್ದಾರೆ ಅಂತಹ ಕಡೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಆ ಯೋಜನೆಗಳಿಗೆ ಆಯಾಯ ವರ್ಷದ ಕೊನೆಯೊಳಗೆ ಹಣವನ್ನು ವಿರ್ಚು ಮಾಡಬೇಕಾಗಿದೆ. ಎಲ್ಲಿ ನಿವೇಶನಗಳು ದೊರಕಿವೆಯೋ ಅಂತಹ ಕಡೆ ಹೆಚ್ಚು ಹಣ ವಿರ್ಚಾಗಿದೆ. ಇದರಲ್ಲಿ ಮಲತಾಯಿ ಧೋರಣೆ ತೋರಿಸಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಾದ ಯಂಕನಾಯ್ಕರ ಪ್ರಶ್ನೆ ಏನೆಂದರೆ ವಿಶ್ವ ಬ್ಯಾಂಕಿನ ಯೋಜನೆಯನ್ವಯ ಕೈಗೊಂಡಂತಹ ಕಾರ್ಯಕ್ರಮದಲ್ಲಿ ಯಾವ ತಾಲ್ಲೂಕಿನಲ್ಲಿ ಅವಶ್ಯಕತೆ ಇದೆಯೋ ಅಂತಹ ಕಡೆ ಹಣವನ್ನು ವೆಚ್ಚ ಮಾಡದೇ ಎಲ್ಲಿ ಅವಶ್ಯಕತೆ ಇಲ್ಲ ಅಂತಹ ಕಡೆ ಹಣವನ್ನು ವ್ಯಯ ಮಾಡಲಾಗಿದೆ. ಒಬ್ಬರಿಗೊಂದು, ಮತ್ತೊಬ್ಬರಿಗೊಂದು ಮಾಡುವುದು ಸರಿಯಲ್ಲ ಅದನ್ನು ಸರಿಪಡಿಸಿ ಎಲ್ಲರಿಗೂ ನ್ಯಾಯ ಸಿಗುವಂತೆ ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಕೆ. ಹೆಚ್. ಪಾಟೀಲ್‌ರವರು ಸಹ ಕೃಷಿ ಮಂತ್ರಿಗಳಾಗಿದ್ದವರು. ಇಂತಹ ಮಲತಾಯಿ ಧೋರಣೆಯನ್ನು ಯಾವ ಸರ್ಕಾರ ಕೂಡ ಮಾಡುವುದಿಲ್ಲ. ವ್ಯತ್ಯಾಸ ಆಗಿರುವುದು ಮಲತಾಯಿ ಧೋರಣೆಯಿಂದಲ್ಲ. ಸ್ಥಳೀಯ ಪಂಚಾಯತಿಗಳು ನಿವೇಶನ ಕೊಡುವುದರಲ್ಲಿ ಎಲ್ಲಿ ಹಿಂದೆ ಬಿದ್ದಿವೆ ಅಂತಹ ಕಡೆಗಳಲ್ಲಿ ಕಡಿಮೆಯಾಗಿವೆ. ಮಾನ್ಯ ಯಂಕನಾಯ್ಕರ ಕ್ಷೇತ್ರಕ್ಕೆ ೫ ಕಡೆಗಳಿಗೆ ಮಂಜೂರಾತಿ ಮಾಡಿದ್ದೇವೆ. ಮೂರು ಕಡೆಗಳಲ್ಲಿ ನಿವೇಶನವನ್ನು ಕೊಡುವುದಕ್ಕೆ ಸ್ಥಳೀಯ ಪಂಚಾಯತಿಗಳು ಮುಂದೆ ಬಂದಿಲ್ಲ. ತೀವ್ರಗತಿಯಲ್ಲಿ ನಿವೇಶನವನ್ನು ಒದಗಿಸಿಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಯಂಕನಾಯಕ್.—ತಮಗೆ ಎಷ್ಟು ಜಾಗ ಬೇಕೋ ಅಷ್ಟು ಜಾಗವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಮಾನ್ಯ ಕೆ. ಹೆಚ್. ಪಾಟೀಲ್‌ರವರು ಕೃಷಿ ಮಂತ್ರಿಗಳಾಗಿದ್ದಾಗ ಎಲ್ಲರಿಗೂ ಒಂದೇ ರೀತಿಯಲ್ಲಿ ಕೊಡುತ್ತಿದ್ದರು. ತಾವು ಒಂದು ತಾಲ್ಲೂಕಿಗೆ ೧೯ ಮತ್ತೊಂದು ತಾಲ್ಲೂಕಿಗೆ ೪ ಈ ರೀತಿ ಕೊಡಬೇಡಿ ಎಲ್ಲ ತಾಲ್ಲೂಕುಗಳಿಗೂ ಒಂದು ರೀತಿಯಾಗಿ ಪಂಚಿ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಲತಾಯಿ ಧೋರಣೆಯನ್ನು ಎಲ್ಲೂ ತೋರಿಸಿಲ್ಲ. ಎಲ್ಲಿ ನಿವೇಶನಗಳನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ ಅಂತಹ ಕಡೆ ಜಾಸ್ತಿ ಕೊಡಲಾಗಿದೆ. ತಾವು ಕೂಡ ನಿವೇಶನ ಕೊಡಿಸುವುದಕ್ಕೆ ಮುಂದೆ ಬರುವುದಾದರೆ ಇನ್ನು ೫ ಕಡೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂಗಳೂರಿನಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡದ ಬಗ್ಗೆ

೧೦೫ (೪೬೪) ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ನೂತನ ಕಛೇರಿ ಸಂಕೀರ್ಣದ ಶಂಕುಸ್ಥಾಪನೆಯಾಗಿ ಒಂದು ವರ್ಷವಾದರೂ ಕೆಲಸ ಪ್ರಾರಂಭಿಸಿ ಅದನ್ನು ಹಠಾತ್ತಾಗಿ ನಿಲ್ಲಿಸಲು ಕಾರಣಗಳೇನು?

ಆ) ಈ ಕಟ್ಟಡದ ಒಟ್ಟು ಮೂಲ ಅಂದಾಜು ವೆಚ್ಚವೆಷ್ಟು, ಇದನ್ನು ಪೂರ್ತಿಗೊಳಿಸಲು ಆಗ ಸೂಚಿಸಿದ ಸಮಯವೆಷ್ಟು?